# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 776/2024

**ಸಾಕ್ಷಿಯನ್ನು ದಿಃ 10.02.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಸಣ್ಣಮ್ಮ | ಸಿಡಬ್ಲ್ಯೂಃ 2 | ಪಿಡಬ್ಲ್ಯೂಃ 4 |
| ಗಂಡನ ಹೆಸರು | ಶಿವರಾಮು | | |
| ವಯಸ್ಸು | 55 ವರ್ಷ | | |
| ಕೆಲಸ | ಕೂಲಿ. | | |
| ವಾಸಸ್ಥಳ | ರಂಗನಾಥ ಬಡಾವಣೆ. | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ–1 ನನ್ನ ಮಗ. ಚಾಸಾ–3 ಮತ್ತು 4 ಗೊತ್ತು. ಈ ಕೇಸಿನ ಆರೋಪಿತರು ಗೊತ್ತು. 2 ವರ್ಷದ ಹಿಂದೆ ಬೆಳಿಗ್ಗೆ 7.30 ಗಂಟೆಗೆ ನಾನು ನಮ್ಮ ಮನೆಯಲ್ಲಿದ್ದಾಗ ಆರೋಪಿತರು 3 ಜನ ನನ್ನ ಮನೆಯ ಹತ್ತಿರ ಗುಂಪು ಕಟ್ಟಿಕೊಂಡು ಬಂದು ಕೊಲೆ ಮಾಡುತ್ತೇವೆ ಬಿಡುವುದಿಲ್ಲ ಎಂದು ಹೇಳಿದರು. ಚಾಸಾ–1 ರವರಿಗೆ 2ನೇ ಆರೋಪಿ ಸೊಂಟಕ್ಕೆ, ಕುತ್ತಿಗೆಗೆ ಹೊಡೆದರು. ನಾನು ಬಿಡಿಸಲು ಹೋದಾಗ ಆರೋಪಿತರು ನನಗೂ ಹೊಡೆದರು. 1ನೇ ಆರೋಪಿ ನನ್ನನ್ನು ಕೆಳಕ್ಕೆ ಕೆಡವಿದರು. ನಾನು ಬಿದ್ದು ಹೋದೆ. ಆಗ ಚಾಸಾ–3 ಮತ್ತು 4 ರವರು ಬಂದದು ಜಗಳ ಬಿಡಿಸಿದರು. ನನಗೆ ತಲೆಗೆ ಬಲ ಕೈಗೆ ಏಟಾಯಿತು. ಚಾಸಾ–1 ರವರು ನನ್ನನ್ನು ಒಂದು ಆಟೋದಲ್ಲಿ ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು. ನಂತರ ಪೊಲೀಸರು ಮಹಜರಿಗೆ ಸ್ಥಳಕ್ಕೆ ಬಂದರು. ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಮಹಜರು ಮಾಡಿದರು. ಪೊಲೀಸರಿಗೆ ಘಟನಾ ಸ್ಥಳವನ್ನು ನಾನೇ ತೋರಿಸಿದ್ದೇನೆ. ಆ ಸಮಯದಲ್ಲಿ ಚಾಸಾ–1 ಮತ್ತು 5 ರವರು ಹಾಜರಿದ್ದರು. ಮಹಜರಿನಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಮಹಜರನ್ನು ನಿಪಿ–4 ಎಂದು ಸಾಕ್ಷಿಯ ಸಹಿಯನ್ನು ನಿಪಿ–4 (ಎ) ಎಂದು ಗುರುತಿಸಲಾಯಿತು. ನಮಗೆ ಹಲ್ಲೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿ ನ್ಯಾಯಾಲಯದ ಮುಂದಿರುವ 1 ಮತ್ತು 2ನೇ ಆರೋಪಿತರನ್ನು ನೋಡಿ ಗುರುತಿಸಿದ್ದು 3ನೇ ಆರೋಪಿ

ಗೈರು ಹಾಜರಿದ್ದು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ಘಟನೆ ದಿನಾಂಕಃ 02.12.2023 ರಂದು ನಡೆದಿದೆ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಬೋಳಿ ಮಗನೇ ಸೂಳೇ ಮಗನೇ ಎಂದು ಕೆಟ್ಟ ಶಬ್ದಗಳಿಂದ ಬೈದರು ಎಂದರೆ ಸರಿ. 1ನೇ ಆರೋಪಿ ಚಾಸಾ-1 ರವರ ಕುತ್ತಿಗೆ ಪಟ್ಟಿ ಹಿಡಿದು ಮುಂದೆ ಹೋಗದಂತೆ ತಡೆದು ನಿಲ್ಲಿಸಿದ ಎಂದರೆ ಸರಿ. ನಾನು ಚಾಸಾ-1 ರವರನ್ನು ಬಿಡಿಸಲು ಹೋದಾಗ 2ನೇ ಆರೋಪಿ ನನ್ನನ್ನು ತಳ್ಳಿ ಕೆಳಕ್ಕೆ ಬೀಳಿಸಿದ ಎಂದರೆ ಸರಿ. ನಿಪಿ-4 ರ ಮಹಜರನ್ನು ದಿನಾಂಕಃ 07.12.2023 ರಂದು ಮಾಡಲಾಗಿದೆ ಎಂದರೆ ಸರಿ. ಆಗ ಚಾಸಾ-5 ಮತ್ತು 6 ರವರು ಹಾಜರಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ**

ಅನಿತಾ ನನ್ನ ಸೊಸೆ. ನನ್ನ , ನನ್ನ ಮಗ ಚಾಸಾ-1 ಮತ್ತು ನನ್ನ ಸೊಸೆಯ ವಿರುದ್ಧ ಸಾಕಮ್ಮ ರವರು ನೀಡಿದ ದೂರಿನ ಮೇರೆಗೆ ನಾವು ಇದೇ ನ್ಯಾಯಾಲಯದಲ್ಲಿ ಹಾಜರಾಗುತ್ತಿದ್ದೇವೆ ಎಂದರೆ ಸರಿ. ಸಾಕಮ್ಮರವರು ನಮ್ಮ ವಿರುದ್ಧ ಏನು ದೂರು ಕೊಟ್ಟಿದ್ದರೆ ಎಂದು ಕೇಳಿ ತಿಳಿದುಕೊಂಡಿದ್ದೇನೆ. ದಿನಾಂಕಃ 02.12.2023 ರಂದು ಬೆಳಿಗ್ಗೆ 7.30 ಗಂಟೆಗೆ ನಾನು ನನ್ನ ಮಗ ಮತ್ತು ಸೊಸೆ ಆರೋಪಿತರು ಹಾಗೂ ಅವರ ತಾಯಿಗೆ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹೊಡೆದಿದ್ದೇವೆ ಎಂದು ದೂರು ನೀಡಿದ್ದಾರೆ ಎಂದರೆ ಸರಿ. ನಾವು ಹೊಡೆದ ಕಾರಣ ಸಾಕಮ್ಮರವರು ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ. ಸಾಕಮ್ಮರವರು ನೀಡಿದ ದೂರಿನ ಮೇರೆಗೆ ಪೊಲೀಸರು ನಮ್ಮನ್ನು ದಸ್ತಗಿರಿ ಮಾಡಲು ನಮ್ಮ ಮನೆಗೆ ಬಂದಿದ್ದರು ಎಂದರೆ ಗೊತ್ತಿಲ್ಲ. ಚಾಸಾ-1

ರವರು ನಮ್ಮ ಊರು ಮತ್ತು ಅಕ್ಕಪಕ್ಕದಲ್ಲಿ ರಾಜಕೀಯವಾಗಿ ಪ್ರಭಾವಿ ವ್ಯಕ್ತಿ ಎಂದರೆ ಗೊತ್ತಿಲ್ಲ. ಸಾಕಮ್ಮರವರು ನೀಡಿದ ದೂರಿನ ಮೇರೆಗೆ ನಮ್ಮನ್ನು ಪೊಲೀಸರು ದಸ್ತಗಿರಿ ಮಾಡಲು ಬಂದಾಗ ಚಾಸಾ-1 ರವರು ಸ್ವಲ್ಪ ಸಮಯ ತೆಗೆದುಕೊಂಡು ಈ ಪ್ರಕರಣದ ದೂರನ್ನು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ.

ನಾನು 3 ದಿನ ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ಇದ್ದೆ. ನಾನು 2 ವರ್ಷಗಳ ಹಿಂದೆ ಬೆಳಿಗ್ಗೆ ಸುಮಾರು 11.00 ಗಂಟೆಗೆ ಚಿಕಿತ್ಸೆಗೆ ದಾಖಲಾಗಿದ್ದೆ. ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ದಿನಾಂಕ ಗೊತ್ತಿಲ್ಲ. ಆಸ್ಪತ್ರೆಗೆ ದಾಖಲಾದಾಗ ವೈದ್ಯರ ಬಳಿ ಯಾರು ನನಗೆ ಹೊಡೆದಿದ್ದಾರೆ ಎಂದು ಹೆಸರು ಹೇಳಿದ್ದೇನೆ. ದೊಣ್ಣೆಯಿಂದ ಹೊಡೆದಿದ್ದಾರೆ ಎಂದು ವೈದ್ಯರಿಗೆ ಹೇಳಿದ್ದೇನೆ. 3 ದಿನ ವೈದ್ಯರು ನನ್ನನ್ನು ಚೆನ್ನಾಗಿ ಉಪಚರಿಸಿದ್ದಾರೆ. ವೈದ್ಯರ ಸೂಚನೆಯ ಮೇರೆಗೆ ಆಸ್ಪತ್ರೆಯಿಂದ ಬಿಡುಗಡೆಗೊಂಡಿದ್ದೇನೆ. ನಾನು ಆಸ್ಪತ್ರೆಗೆ ದಾಖಲಾದ ದಿನವೇ ವೈದ್ಯರ ಸೂಚನೆಯನ್ನು ಪಾಲಿಸದೇ ಆಸ್ಪತ್ರೆಯಿಂದ ಓಡಿ ಬಂದಿದ್ದೇನೆ ಎಂದರೆ ಸರಿಯಲ್ಲ. ನಾನೇ ಆಸ್ಪತ್ರೆಯಿಂದ ಓಡಿ ಬಂದ ಕಾರಣ ನನಗೆ ವೈದ್ಯರು ಯಾವುದೇ ಚಿಕಿತ್ಸೆಯನ್ನು ಕೊಡಲು ಸಾಧ್ಯವಾಗಲಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿತರು ಹಲ್ಲೆ ಮಾಡಿರುವುದು ನಾನು ಆ ಬಗ್ಗೆ ಚಿಕಿತ್ಸೆಯನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1 ಮತ್ತು 2ನೇ ಆರೋಪಿತರು ನನ್ನನ್ನು ತಳ್ಳಿ ಬೀಳಿಸಿದ್ದಾರೆ ಎಂದು ನಾನು ಹೇಳುತ್ತಿರುವುದು ಎರಡೂ ಸತ್ಯವಾಗಿದೆ. 1ನೇ ಆರೋಪಿ ನನ್ನನ್ನು ತಳ್ಳಿ ಹಾಕಿದರು ಎಂದು ಪೊಲೀಸರಿಗೆ ಹೇಳಿದ್ದೇನೆ. ನನ್ನನ್ನು ತಳ್ಳಿದ್ದರಿಂದ ನನ್ನ ಸೊಂಟ ಮತ್ತು ಕುತ್ತಿಗೆಗೆ ಪೆಟ್ಟಾಯಿತು ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ನಾನು ಈ ವಿಷಯವನ್ನು ಈ ದಿನ ನ್ಯಾಯಾಲಯದಲ್ಲಿ ಹೊರತುಪಡಿಸಿ ಬೇರೆಲ್ಲಿಯೂ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ನಂತರ ಹೆಚ್ಚಿನ ಚಿಕಿತ್ಸೆಯನ್ನು ಪಡೆಯದೇ ವೈದ್ಯರಿಗೆ ಹೇಳದೇ ಆಸ್ಪತ್ರೆಯಿಂದ ಮನೆಗೆ ಬಂದು ಬಿಟ್ಟೆ ಎಂದು ಪೊಲೀಸರಿಗೆ ಹೇಳಿದ್ದೇನೆ. ಆಸ್ಪತ್ರೆಯಿಂದ ಮನೆಗೆ ಬಂದ ತಾರೀಖು ಮತ್ತು ಸಮಯ ಎಷ್ಟು ಎಂದರೆ ಗೊತ್ತಿಲ್ಲ. ನನಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದು ಹೇಳುವ ಬಗ್ಗೆ ನಿಖರವಾಗಿ ಹೆಸರು ಹೇಳಿಲ್ಲ ಎಂದರೆ ಹೇಳಿದ್ದೇನೆ. ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ ಎಂದು ಈ ದಿನ ಹೊರತು ಪಡಿಸಿ ಬೇರೆ ಎಲ್ಲಿಯೂ ಹೇಳಿಲ್ಲ ಎಂದರೆ ಪೊಲೀಸರ ಮುಂದೆ ಹೇಳಿದ್ದೇನೆ. ದಿನಾಂಕಃ 02.12.2023 ರಂದು ಘಟನೆ ನಡೆದಿದೆ

ಎಂದು ಈ ದಿನ ಸಹಾಯಕ ಸರ್ಕಾರಿ ಅಭಿಯೋಜಕರು ಸೂಚಿಸಿದಾಗ ನನಗೆ ಗೊತ್ತಾಗಿದೆ ಎಂದರೆ ಸರಿ. 2ನೇ ಆರೋಪಿ ನನ್ನನ್ನು ತಳ್ಳಿದರು ಎಂದು ಈ ದಿನ ಸೂಚಿಸಿದಾಗ ನನಗೆ ಗೊತ್ತಾಗಿದೆ ಎಂದರೆ ಸರಿ. ಘಟನೆ ನಡದಿದೆ ಎನ್ನುವ ನಿಖರವಾದ ಸ್ಥಳ ನನ್ನ ಮನೆಯ ಮುಂದಿನ ತಿಪ್ಪಲಾಪುರ ರಸ್ತೆಯಲ್ಲಿರುವ ಶಾಲೆಯ ಹತ್ತಿರ. ಸರ್ಕಾರಿ ಶಾಲೆಯ ಯಾವ ದಿಕ್ಕಿಗೆ ಘಟನೆ ನಡದಿದೆ ಎಂದರೆ ಸಾಕ್ಷಿ ದಿಕ್ಕು ಹೇಳುವುದಿಲ್ಲ.

ಘಟನೆ ನಡಯಿತು ಎನ್ನುವ ಸ್ಥಳದಿಂದ ತಿಪ್ಪಲಪುರ ಹುಣಸೂರು ರಸ್ತೆ ಸುಮಾರು 3 ಮೈಲಿ ದೂರದಲ್ಲಿದೆ. ಸದರಿ ರಸ್ತೆಯಿಂದ ನನ್ನ ಮನೆ ಪಶ್ಚಿಮ ದಿಕ್ಕಿಗೆ ಬರುತ್ತದೆ. ನಮ್ಮ ಮನೆಯ ಬಾಗಿಲು ತಿಪ್ಪಲಪುರ ರಸ್ತೆಯ ಕಡೆಗೆ ಹಾಗೂ ಇನ್ನೊಂದು ಬಾಗಿಲು ವಿರುದ್ಧ ದಿಕ್ಕಿನಲ್ಲಿದೆ. ಸಾಕಮ್ಮರವರ ಮನೆ ಟಾರ್ ರಸ್ತೆಯ ಯಾವ ದಿಕ್ಕಿಗೆ ಬರುತ್ತದೆ ಎಂದು ಗೊತ್ತಿಲ್ಲ. ಈ ಘಟನೆಯ ಬಗ್ಗೆ ಪೊಲೀಸರು ನನ್ನನ್ನು ಠಾಣೆಗೆ ಕರೆಸಿಲ್ಲ. ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೀರಿ ಎನ್ನುವುದು ಸುಳ್ಳೇ ಎಂದರೆ ಸರಿಯಲ್ಲ. ಮಹಜರಿನಲ್ಲಿ ನನ್ನ ಮನೆಗೆ ಎರಡು ಕಡೆ ಬಾಗಿಲಿದೆ ಎಂದು ಬರೆದಿದ್ದಾರೆ. ಘಟನಾ ಸ್ಥಳದಿಂದ 3 ಮೈಲು ದೂರದಲ್ಲಿ ತಿಪ್ಪಲಪುರ ಹುಣಸೂರು ರಸ್ತೆ ಇದೆ ಎಂದು ಮಹಜರಿನಲ್ಲಿ ಬರೆದಿದ್ದಾರೆ. ನಿಪಿ-4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-4 ಕ್ಕೆ ಯಾರೆಲ್ಲಾ ಸಹಿ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ದಿನಾಂಕಃ 07.12.2023 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿ. ಸಾಕಮ್ಮರವರು ನೀಡಿದ ದೂರಿನಲ್ಲಿ ನನ್ನನ್ನು ಪೊಲೀಸರು ಬಂದಿಸುತ್ತಾರೆ ಎಂದು ಹೆದರಿ ನಾನು ಆಸ್ಪತ್ರೆಯಿಂದ ವೈದ್ಯರಿಗೆ ಕೇಳದೇ ಮನೆಗೆ ಓಡಿ ಹೋಗಿದ್ದೇನೆ ಎಂದರೆ ಗೊತ್ತಿಲ್ಲ. ದಿನಾಂಕಃ 02.12.2023 ರಂದು ಬೆಳಿಗ್ಗೆ 7.45 ಗಂಟೆ ಸಮಯದಲ್ಲಿ ನಾನು ಹೇಳಿದ ರೀತಿಯಲ್ಲಿ ಆರೋಪಿತರು ನಮ್ಮೊಂದಿಗೆ ಯಾವುದೇ ಗಲಾಟೆ ಮಾಡಿಲ್ಲ, ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 02.12.2023 ರಂದು ನಾನು ನನ್ನ ಮಗ ಮತ್ತು ಸೊಸೆ ಸೇರಿಕೊಂಡು ಆರೋಪಿತರೊಂದಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು

ಸಾಕಮ್ಮರವರಿಗೆ ಕೈಗಳಿಂದ ಮೈ ಕೈಗೆ ಹೊಡೆದು ಪ್ರಾಣ ಬೆದರಿಕೆ ಹಾಕಿದ್ದೇವೆ ಎಂದರೆ ಸರಿಯಲ್ಲ. ಆ ಪ್ರಕರಣವನ್ನು ಮುಚ್ಚಿ ಹಾಕುವ ಸಲುವಾಗಿ ಚಾಸಾ–1 ರವರ ರಾಜಕೀಯ ಪ್ರಭಾವದ ಮೇರೆಗೆ ಸುಳ್ಳು ದೂರನ್ನು ನೀಡಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.